

ಮುಖ್ಯಪಾತ್ರಿ ಮತ್ತು ಬೊಳ್ಕಾಟ್ ಕುಣಿತದ ತಂಡದವರು

# ಬನ್ನಿ ಅರೆಕಲ್ಲು ಅಯ್ಯಪ್ಪ ದೇವರಕಾಡಿನ ಹಬ್ಬಕೆ...

■ ಸಹನಾ ಕಾಂತಬೈಲು



ದೇವರಿಗೆ ಅರ್ಪಿಸಲು ತಯಾರಾದ ದೋಸೆ

ದೇವರಕಾಡು ಎಂದರೆ ಯಾವುದಾದರೊಂದು ದೈವ ಅಥವಾ ದೇವರ ಹೆಸರಿನಲ್ಲಿ ಸಂರಕ್ಷಿಸಲ್ಪಟ್ಟ ಒಂದು ನಿರ್ದಿಷ್ಟ ಕಾಡಿನ ಪ್ರದೇಶ. ಇಲ್ಲಿನ ಮರಗಿಡಗಳು, ಪ್ರಾಣಿಪಕ್ಷಿಗಳು ಮತ್ತು ಜಲಮೂಲಗಳನ್ನು ದೇವರ ಸ್ವತ್ತು ಎಂದು ಭಾವಿಸಲಾಗುತ್ತದೆ. ಧಾರ್ಮಿಕ ನಂಬಿಕೆಗಳ ಕಾರಣದಿಂದಾಗಿ ಇಲ್ಲಿ ಮರ ಕಡಿಯುವುದು ಅಥವಾ ಪ್ರಾಣಿಗಳನ್ನು ಹತ್ಯೆ ಮಾಡುವುದನ್ನು ನಿಷೇಧಿಸಲಾಗಿರುತ್ತದೆ.

ಕೊಡಗು ಜಿಲ್ಲೆ ಕರ್ನಾಟಕದಲ್ಲೇ ವಿಭಿನ್ನ ಸಂಸ್ಕೃತಿ ಹೊಂದಿದ ಜಿಲ್ಲೆ. ಈ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ದೇವರಕಾಡು ಇರುತ್ತದೆ. ಜಗತ್ತಿನಲ್ಲೇ ಅತೀ ಹೆಚ್ಚು ದೇವರಕಾಡು ಇರುವುದು ಕೊಡಗಿನಲ್ಲೇ. ಇಲ್ಲಿ 1214 ದೇವರಕಾಡುಗಳಿವೆ ಹಾಗೂ 2550 ಹೆಕ್ಟೇರ್ ಪ್ರದೇಶ ಹೊಂದಿದ್ದು 165 ದೇವರುಗಳ ಹೆಸರಿನಲ್ಲಿ ಪೂಜಿಸಲಾಗುತ್ತಿದೆ. ಕೊಡಗಿನ ದೇವರಕಾಡುಗಳನ್ನು 18 ಮೂಲನಿವಾಸಿಗಳು ಸಂರಕ್ಷಿಸಿಕೊಂಡು ಬಂದಿರುತ್ತಾರೆ. ಪ್ರತಿ ಗ್ರಾಮದ ಗ್ರಾಮಸ್ಥರು ಅರಣ್ಯ ಇಲಾಖೆಯ ಸಹಕಾರದೊಂದಿಗೆ ಈ ದೇವರಕಾಡುಗಳ ನಿರ್ವಹಣೆ ಮಾಡುತ್ತಾರೆ. ಕೆಲವು ದೇವರ ಕಾಡುಗಳಲ್ಲಿ ದೇವಸ್ಥಾನಗಳು ಇವೆ. ಮತ್ತೆ ಕೆಲವು ದೇವರ ಕಾಡುಗಳಲ್ಲಿ ಮಾಡಿಲ್ಲದ ಸಣ್ಣ ಗುಡಿಗಳಿವೆ. ಇನ್ನು ಕೆಲವು ದೇವರಕಾಡುಗಳಲ್ಲಿ ದೇವಸ್ಥಾನವಿಲ್ಲದೆ ಕಲ್ಲು ಅಥವಾ ತ್ರಿಶೂಲವನ್ನಿಟ್ಟು ಪೂಜೆ ಮಾಡುವ ಪದ್ಧತಿ ಇದೆ. ಈ ದೇವರಕಾಡುಗಳು ಇಲ್ಲಿಯ ಜನರಿಗೆ ಪೂಜನೀಯ ಪವಿತ್ರ ಸ್ಥಳಗಳಾಗಿವೆ.

ದೇವರಕಾಡುಗಳು ಕೊಡಗಿನ ಧಾರ್ಮಿಕ ಕೇಂದ್ರ ಮಾತ್ರ ಅಲ್ಲ ಗ್ರಾಮದ ಒಗ್ಗಟ್ಟನ್ನು ಸಂಸ್ಕೃತಿ, ಪರಂಪರೆಯನ್ನು ರಕ್ಷಿಸಿವೆ. ಕೊಡಗಿನ ಎಲ್ಲಾ ಮೂಲನಿವಾಸಿಗಳಿಗೂ ಇಲ್ಲಿ ಸ್ಥಾನ ಇದೆ, ಜವಾಬ್ದಾರಿ ಇದೆ. ಕೆಲವು ದೇವರಕಾಡುಗಳಲ್ಲಿ ಎರಡು ವರ್ಷಗಳಿಗೊಮ್ಮೆ ಹಬ್ಬ ನಡೆದರೆ,